ಬೇಕಾಗಿದೆ. ನಮ್ಮಲ್ಲಿ ಒಂದು ಎಕರೆ ಭೂಮಿಗೆ ೧೫೦೦ ರೂಪಾಯಿ ಆಗುತ್ತದೆ, ಆದರೆ ೨ ಸಾವಿರ ರೂಪಾಯಿ ಕನ್ವರ್ಷನ್‌ಗೆ ಆಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ.— ಕನ್ವರ್ಷನ್ ಚಾರ್ಜನ್ನು ನಾವು ಕಲೆಕ್ಟ್ ಮಾಡುತ್ತಾ ಇಲ್ಲ. Conversion charge is collected by the Revenue Department.

SRI C. M. REVANNASIDDAIAH.— Apart from I am speaking. He has to spend money upto the Divisional level, upto the State level...

ಅಧ್ಯಕ್ಷರು.— ನಿಮಗೆ ೩ ಸಾರಿ ಅವಕಾಶ ಕೊಟ್ಟಿದ್ದೇನೆ.

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.— ಹಳ್ಳಿಯವರು ದಡ್ಡರು ಎನ್ನುವುದಲ್ಲ ಅವರು ಮನೆ ಕಟ್ಟಿಕೊಂಡುಬಿಡುತ್ತಾರೆ. ಅಲ್ಯಾಂಡ್ ಸೀಲಿಂಗ್ ಅಗ್ರಿಕಲ್ಚರ್ ಆಗಿದ್ದರೆ ಒಂದು ಎಕರೆಗೆ ೧೨ ಸಾವಿರ ರೂಪಾಯಿಗಳು ದಂಡ ಆಗುತ್ತದೆ. ಇದು ಸರಿಯೇ ? ಅವನು ದಡ್ಡ ಕಟ್ಟಿಕೊಳ್ಳುತ್ತಾನೆ. ಅವನಿಗೆ ೧೨ ಸಾವಿರ ದಂಡ ಆಗುತ್ತದೆ. He has to pay 25 paise per cent and it comes to 12,000 per acre. ಅನ್ಯಾಯವಾಗಿ ಅವರಿಗೆ ದಂಡ ಹಾಕುತ್ತಾ ಇದ್ದೀರಿ, ಇದಕ್ಕೆ ಅವರಿಗೆ ರಿಯಾಯಿತಿ ಕೊಡಿ.

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಹಿರಿಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಆದರೆ ಹಳ್ಳಿಯವರು ಇರಲಿ, ಪಟ್ಟಣದವರು ಇರಲಿ, Ignorance of law is no excuse, ಕಾಯಿದೆ ವಿರುದ್ಧ ಆಗಿದ್ದರೆ. ಯಾರೇ ಕೃಪಾ ತೆಗೆದುಕೊಂಡರೂ ಸಹ ನಾನು ಒಪ್ಪಿಕೊಳ್ಳುತ್ತೇನೆ. ನಾವು ಪೆನಾಲ್ಟಿ ಹಾಕುವಾಗಲೂ ಸಹ ಇತಿಮಿತಿಯಲ್ಲಿ ರೀಸನಬಲ್ ಇರಬೇಕು ಆ ದೃಷ್ಟಿಯಿಂದ ನಾನು ಆದೇಶ ಕೊಡುತ್ತೇನೆ. ಆದಷ್ಟು ನೀವೂ ಸಹ ಯಾವುದೇ ಮನೆ ಕಟ್ಟುವಾಗ ಹಳ್ಳಿ ಜನರಿಗೆ ಸರಿಯಾದ ಮಾರ್ಗದರ್ಶನ ಮಾಡಿ ಪರ್ಮಿಷನ್ ತೆಗೆದುಕೊಂಡು ಕಟ್ಟಲಿಕ್ಕೆ ಹೇಳಿ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನೋಂದಣಿಯಾಗಿರುವ ಗುತ್ತಿಗೆದಾರರುಗಳು

೨೦೦. ಶ್ರೀಮತಿ ಮುಕ್ತಾರುನ್ನಿಸ ಬೇಗಂ, (ನರಸಿಂಹರಾಜ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸಿಕೊಂಡಿರುವವರ ಗುತ್ತಿಗೆದಾರರುಗಳ ಒಟ್ಟು ಸಂಖ್ಯೆ ?

ಆ) ಅವರುಗಳಿಗೆ ಕೆಲಸ ಹಂಚಿದ ಮತ್ತು ಕೆಲಸಗಳ ಒಟ್ಟು ಮೊತ್ತ.

ಇ) ಈ ವರ್ಷದಲ್ಲಿ ಎಷ್ಟು ಕಬ್ಬಿಣ, ಸಿಮೆಂಟು ಮತ್ತು ಇತರ ಅವಶ್ಯ ಪದಾರ್ಥಗಳನ್ನು ಅವರು ಖರೀದಿಸಿರುತ್ತಾರೆ ಹಾಗೂ ನಿಖರವಾಗಿ ಬಳಸಿರುತ್ತಾರೆ.

ಈ) ಇವುಗಳನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದ ಪಕ್ಷದಲ್ಲಿ ಸರ್ಕಾರದವರು ಈ ಬಗ್ಗೆ ತೆಗೆದುಕೊಂಡ ಕ್ರಮ

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಗುತ್ತಿಗೆದಾರರುಗಳನ್ನು ನೋಂದಣಿ ಮಾಡುವುದಿಲ್ಲ. ಪ್ರಾಧಿಕಾರದ ಕೆಲಸಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾಗಿರುವ ಗುತ್ತಿಗೆದಾರರುಗಳಿಗೆ ಕೊಡಲಾಗುತ್ತದೆ.

ಆ) ಒಟ್ಟು ೪೬.೫೫ ಲಕ್ಷ ರೂಗಳ ೧೪೪೭ ಕಾಮಗಾರಿ ಕೆಲಸಗಳನ್ನು ಕೊಡಲಾಗಿತ್ತು.

ಇ)		ಕೊಂಡಿರುವುದು		ಬಳಸಿರುವುದು	
೧.	ಸ್ಟೀಲ್	೮೭೪.೧೫	ಮೆ.ಟನ್	೫೭೪.೧೫	ಮೆ.ಟನ್
೨.	ಸಿಮೆಂಟ್	೫೨೪೮.೧೫	ಮೆ.ಟನ್	೫೨೪೮.೧೫	ಮೆ.ಟನ್

ಇತರೆ ಪದಾರ್ಥಗಳು

ಅ)	ಆರ್‌ಸಿಸಿ ಪೈಪು	೩೬೯		೩೬೯	
ಆ)	ಜಿ.ಐ. ಪೈಪ್	೧೬೫೧.೪೬	ಮೀ.	೧೬೫೧.೪೬	ಮೀ.
ಇ)	ಎ.ಸಿ. ಷೀಟ್ಸ್	೮೨೨		೮೨೨	
ಈ)	ಎ.ಸಿ. ರಿಡ್ಜ್ ಷೀಟ್ಸ್	೪೪	ಜೋಡಿ	೪೪	ಜೋಡಿ
ಉ)	ಬೀದಿ ದೀಪ ಫಿಟಿಂಗ್ಸ್	೧೮೪	ಸೆಟ್	೧೮೪	ಸೆಟ್
ಈ)	ಇಲ್ಲ.				
ಊ)	ಉದ್ಭವಿಸುವುದಿಲ್ಲ.				

SMT. MUKHTARUNNISA.—Sir, let me know out of 1447 works which have been entrusted to the contractors through tenders, how many contractors are working on tender basis. I would like to know the names of those contractors and how many contractors are working on piece work because the amount is to the tune of 456.35 lakhs. So, let me know how many contractors are working on tender basis and how many through piece work.

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೆ, ಕಂಟ್ರಾಕ್ಟರ್ಸ್ ಎಷ್ಟು ಜನ ಎಂದು ಕೇಳಿದ್ದಾರೆ, ಈಗ ನನ್ನಲ್ಲಿ ಕಂಟ್ರಾಕ್ಟರ್ಸ್ ಪಟ್ಟಿ ಇಲ್ಲ, ಅದನ್ನು ನಾನು ಫರ್‌ನಿಷ್ ಮಾಡುತ್ತೇನೆ ಅವರು ಆ ಪ್ರಶ್ನೆ ಕೇಳಿರಲಿಲ್ಲ. ಈಗ ೧೪೫೦ ಕೆಲಸ ಇದೆ. ಈಗ ಪೀಸ್ ವರ್ಕ್‌ಕೆಲಸ ಕೇಳಬಹುದು. ಪೀಸ್ ವರ್ಕ್ ಕೆಲಸ ೧ ಲಕ್ಷ. ೨೦೬ ಲಕ್ಷ ಕೆಲಸಗಳು ಬೈ ಟೆಂಡರ್ಸ್. ಈ ವರ್ಕ್ಸ್ ಏನಿವೆ ಇವು ೧-೧-೧೯೮೮ ರಿಂದ ೨೮-೨-೧೯೮೯ರ ವರೆಗಿನ ಕೆಲಸಗಳು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಅವರು ಕೇಳುವ ಉದ್ದೇಶ ಏನೆಂದರೆ, ೪ ಕೋಟಿ ೫೬ ಲಕ್ಷ ರೂಪಾಯಿಗಳ ಕೆಲಸ ಮೈಸೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಏನಿದೆ ಇದಕ್ಕೆ ಟೆಂಡರ್ ಕಾಲ್‌ಫರ್ ಮಾಡಿದವರು ಯಾರು ? ಮತ್ತು ಕೆಲಸವನ್ನು ತೆಗೆದುಕೊಂಡ ಕಂಟ್ರಾಕ್ಟರ್ಸ್ ಯಾರು ? ಏಕೆಂದರೆ ಅಲ್ಲಿನ ಇಂಜಿನಿಯರ್ಸ್ ತಮಗೆ ಬೇಕಾದವರಿಗೆ ಪೀಸ್‌ವರ್ಕ್ ಮೇಲೆ ಕೊಟ್ಟು ಎರಡೂವರೆ ಕೋಟಿ ರೂಪಾಯಿ ಕೆಲಸ ಮಾಡಿಸಿ ಕಮೀಷನ್ ತೆಗೆದುಕೊಂಡು ಅವರವರು ಸರಿಹೋಗಿದ್ದಾರೆ ಎನ್ನುವುದು ಅವರ ಪಾಡ, ಅದಕ್ಕಾಗಿ ಕಂಟ್ರಾಕ್ಟರ್ಸ್ ಹೆಸರು, ಟೆಂಡರ್ ಯಾವಾಗ ಕಾಲ್‌ಫರ್ ಮಾಡಿದರು ಎಷ್ಟೆಷ್ಟು ಟೆಂಡರ್ ಆಗಿದೆ ಅದೆಲ್ಲಾ ಹೇಳುವ ಅವಶ್ಯಕತೆ ಇದೆ.

ಶ್ರೀ ಆರ್. ವಿ. ದೇಶಪಾಂಡೆ.—ಈಗಾಗಲೇ ಕೆಲಸದ ಬಗ್ಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈ ೧,೪೪೭ ವರ್ಕ್ಸ್ ಬಗ್ಗೆ ೪ ಕೋಟಿ ೫೬ ಲಕ್ಷ ೩೫ ಸಾವಿರ ರೂಪಾಯಿ ಏನು ಆಗಿದೆ ಇವರ ಪೀರಿಯಡ್ ೧-೧-೧೯೮೮ ರಿಂದ ೨೮-೨-೧೯೮೯. ಇದರಲ್ಲಿ ೧ ಲಕ್ಷ ಕೆಲಸಗಳು ಪೀಸ್‌ವರ್ಕ್ ಕೆಲಸ ನಡೆದಿದೆ. ೨೦೬ ಲಕ್ಷ ಕೆಲಸಗಳು ಟೆಂಡರ್ ಮುಖಾಂತರ ಮಾಡಿದ್ದಾರೆ. ಈಗ ಪವಾನ್ಯ ಸದಸ್ಯರು ಕಂಟ್ರಾಕ್ಟರ್ಸ್ ಯಾರು ಯಾರು, ಯಾವ ಯಾವ ವರ್ಕ್ಸ್, ಎಷ್ಟೆಷ್ಟು ಹಣ ಎಂದು ಏನು ಕೇಳಿದ್ದಾರೆ ಅದರ ಬಗ್ಗೆ ಮಾಹಿತಿ ಇಲ್ಲ, ಅದನ್ನು ನಾನು ಒದಗಿಸುತ್ತೇನೆ.

SMT. MUKTHARUNNISA.—Sir, contractor names only important in this question because this is a work of 456.35 lakhs. In my opinion they have entrusted it as piece work to the known persons. They have not called for the tenders. Another thing is, it has been entrusted to few contractors by breaking the project estimate by

limiting them to Rs. 25,000/-. Another thing is, What is the total amount spent on the purchase of cement and steel? From which company these materials have been purchased? Whether Finance Committee or the purchase Committee of the MDA has approved the purchase?

SRI R. V. DESHPANDE.—I do not have the list of contractors or the companies from whom they have purchased the cement and steel. If the hon. Member has got any specific complaint against any particular company or the contractor and if the hon'ble Member furnishes, I will order for an enquiry. As far as the cost of these materials, the hon. Member has not asked any specific question. She has asked about the quantity. I can furnish the information about it. Lastly about cement and steel. These materials have been purchased by calling for tenders. These have been bought as per the SPD rates.

(Interruption)

SMT. MUKTARUNNISA.—From which firm they have purchased?

(Interruption)

MR. SPEAKER.—The hon'ble Minister requires some more time to the question No. 137 (536) of the hon. Member Sri R. Venkataramaiah.

11-30 P.M.

SRI R. V. DESHPANDE.—Sir, the question is not clear. There is no scheme 'Janatha Indira Awaz' as such. The question is not correct. I want time. We have not gone into this.

ಶ್ರೀ ಆರ್. ವೆಂಕಟರಾಮಯ್ಯ.—ನಿಮ್ಮ ಹತ್ತಿರ ಯಾವುದು ಇದೆ?.....

ಅಧ್ಯಕ್ಷರು.—ದೇಶಪಾಂಡೆಯವರೆ, ನಿಮ್ಮ ಹತ್ತಿರ ಇಂದಿರಾ ಆವಾಜ್‌ಗೆ ಸಂಬಂಧಪಟ್ಟಂತೆ ಇದ್ದರೆ ಅದನ್ನೆ ಕೊಡಿ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರ ಪ್ರಶ್ನೆ ಸ್ಪೆಸಿಫಿಕ್ ಆಗಿಲ್ಲ. ಆದ್ದರಿಂದ.....

ಅಧ್ಯಕ್ಷರು.—ನಿಮಗೆ ಟೈಂ ಬೇಕೋ, ಉತ್ತರ ಕೊಡುತ್ತೀರೋ?.....

ಶ್ರೀ ಆರ್. ವಿ. ದೇಶಪಾಂಡೆ.—ನನಗೆ ಟೈಂ ಬೇಕು.

ಶ್ರೀಮತಿ ಮುಕ್ತರುನ್ನೀಸಾ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಏನು ಉತ್ತರ ಕೊಟ್ಟರೋ ಗೊತ್ತಾಗಲಿಲ್ಲ. ನಮ್ಮ ಪ್ರಶ್ನೆಗೆ ಸರಿಯಾದ ಉತ್ತರ ಹೇಳದಿದ್ದರೆ ನಾವು ಇನ್ನೂ ವಿವರಕ್ಕೆ ಪ್ರಶ್ನೆಗಳನ್ನು ಹಾಕಬೇಕು.

(ಗೊಂದಲ)

ಅಧ್ಯಕ್ಷರು.—ಸ್ಯಾಟಿಸ್‌ಫೈ ಆಗದಿದ್ದರೆ, ಅರ್ಧ ಗಂಟೆ ಕಾಲದ ಚರ್ಚೆಗೆ ನೋಟೀಸ್ ಕೊಡಿ.

SRI R. V. DESHPANDE.—I have assured the hon'ble Member. If there are any specific complaints about specific works or contract or purchase, I will order for an enquiry. What more a Minister can do?

ಶ್ರೀಮತಿ ಮುಕ್ತರುನ್ನೀಸ... ಇದರ ಬಗ್ಗೆ ಎಷ್ಟಸಾರಿ ಫೈನಲೈಸ್ ಮಾಡಿದ್ದಾರೆ ಎಂಬುದನ್ನು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು ಸ್ಪಷ್ಟವಾಗಿ ''ಡಿ'' ಪ್ರಶ್ನೆಯಲ್ಲಿ ''ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ'' ಎಂದು ಪ್ರಸ್ತಾಪ ಮಾಡಿದ್ದಾರೆ.....

ಅಧ್ಯಕ್ಷರು.—ಇದರ ಬಗ್ಗೆ ಮಾನ್ಯ ಸದಸ್ಯರೂ ಕೂಡ ೨ ಸಾರಿ ಪ್ರಶ್ನೆಗಳನ್ನು ಕೇಳಿದ್ದಾರೆ, ನಂತರ ಮಾನ್ಯ ಖಿರ್ನಿಯವರೂ ಕೂಡ ಪ್ರಶ್ನೆಯನ್ನು ಕೇಳಿದ್ದಾರೆ. ಇದಕ್ಕೆ ಮಾನ್ಯ ಸಚಿವರೂ ಕೂಡ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಇನ್ನೂ ಎಷ್ಟುಸಾರಿ ಇವರಿಗೆ ಅವಕಾಶವನ್ನು ಕೊಡಬೇಕು ?

ಶ್ರೀ ಆರ್. ವಿ. ದೇಶಪಾಂಡೆ.—ನಾನು ಕೊಟ್ಟ ಉತ್ತರದಿಂದ ಮಾನ್ಯ ಸದಸ್ಯರಿಗೆ ಸ್ಯಾಟಿಸ್‌ಫೈ ಆಗದಿದ್ದರೆ ವರ್ಕ್ಸ್ ಬಗ್ಗೆಯಾಗಲಿ, ಕಾಂಟ್ರ್ಯಾಕ್ಟ್ ಬಗ್ಗೆಯಾಗಲಿ, ಪರ್ಚೇಸ್ ಬಗ್ಗೆಯಾಗಲಿ ದೂರುಗಳು ನಿರ್ದಿಷ್ಟವಾಗಿದ್ದರೆ ಅಂಥಾದ್ದನ್ನು ಕೊಡಲಿ, ಅದಕ್ಕೆ ಉತ್ತರವನ್ನು ಕೊಡುತ್ತೇನೆ.

ಶ್ರೀಮತಿ ಮುಕ್ತರುನ್ನೀಸಾ.—ಎಷ್ಟು ಕೆಲಸವನ್ನು ಫೈನಲೈಸ್ ಮಾಡಿದ್ದೀರಿ ? ಯಾವ ಯಾವ ಕಂಪೆನಿಗಳಿಂದ ಸ್ಟೀಲ್‌ನ್ನು ಪರ್ಚೇಸ್ ಮಾಡಿದ್ದೀರಿ ? ಯಾವ ಯಾವ ಕಂಪನಿಗಳಿಂದ ಸಿಮೆಂಟ್‌ನ್ನು ಪರ್ಚೇಸ್ ಮಾಡಿದ್ದೀರಿ ? ಈ ರೀತಿ ಪರ್ಚೇಸ್ ಮಾಡುವುದಕ್ಕೆ ಮುಂಚೆ ಪರ್ಚೇಸ್ ಕಮಿಟಿ ಮತ್ತು ಫೈನಾನ್ಸ್ ಕಮಿಟಿಯ ಅಪ್ರೂವಲ್‌ನ್ನು ತೆಗೆದುಕೊಂಡಿದೆಯೆ ? ಪೇಸ್ ವರ್ಕ್‌ನ್ನು ಯಾರು ಯಾರಿಗೆ ಕೊಟ್ಟಿದ್ದೀರಿ ? ಅವರ ಹೆಸರುಗಳೇನು ?...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ. ಈ ಕಾಮಗಾರಿಯನ್ನು ಕೊಟ್ಟಿರುವುದರಲ್ಲಿ ದುರ್ವ್ಯವಹಾರ ನಡೆದಿದೆ ಎಂದು ಮಾನ್ಯ ಸದಸ್ಯರು ಆರೋಪ ಮಾಡಿದ್ದಾರೆ. ಆದರೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಯಾವು ಯಾವುದರಲ್ಲಿ ದುರ್ವ್ಯವಹಾರವಾಗಿದೆ ಎಂಬುದನ್ನು ಸ್ಪೆಸಿಫಿಕ್ ಆಗಿ ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದಾರೆ. ಇದರಲ್ಲಿ ಒಂದಲ್ಲ, ಎರಡಲ್ಲ, ಇರತಕ್ಕದ್ದು. ಬಹಳಷ್ಟು ದೂರುಗಳಿವೆ. ಅದನ್ನೆಲ್ಲಾ ಹೇಳುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಈ ಎಲ್ಲ ವಿವರಗಳನ್ನೂ ಹೇಳಬೇಕಾದರೆ ಇದರ ಬಗ್ಗೆ ಅರ್ಧ ಗಂಟೆ ಕಾಲದ ಚರ್ಚೆಗೆ ಅವಕಾಶವನ್ನು ತಾವು ಕೂಡಬೇಕು, ಇಲ್ಲದಿದ್ದರೆ ನೇರವಾಗಿ ಈ ದುರ್ವ್ಯವಹಾರದ ಬಗ್ಗೆ ತನಿಖೆಯನ್ನು ನಡೆಸುವುದಕ್ಕೆ ಆರ್ಡರ್ ಮಾಡಬೇಕು.

ಅಧ್ಯಕ್ಷರು.—ಇದನ್ನು ಅರ್ಧಗಂಟೆ ಚರ್ಚೆಯಾಗಿ ತೆಗೆದುಕೊಳ್ಳೋಣ. ಈಗ ಮಾನ್ಯ ದೇಶಪಾಂಡೆಯವರೇ ಶ್ರೀಮತಿ ಚೌಗಲೆಯವರ ಪ್ರಶ್ನೆಗೆ ಉತ್ತರವನ್ನು ಕೊಡಿ.

ಶ್ರೀ ಆರ್. ವಿ. ದೇಶಪಾಂಡೆ.—ಉತ್ತರವನ್ನು ಮೊದಲೇ ಕೊಟ್ಟಿದ್ದೇನೆ.

ಚಿಕ್ಕೋಡಿ ಹುಡ್ಕೋ ಮನೆಗಳು.

೭೧೭ ಶ್ರೀಮತಿ ಶಕುಂತಲಾ ಟಿ ಚೌಗಲೆ (ಚಿಕ್ಕೋಡಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕೋಡಿಯಲ್ಲಿ ಹುಡ್ಕೋ ಮನೆಗಳ ಯೋಜನೆಯಲ್ಲಿ ಕೈಗೆತ್ತಿಕೊಂಡು ಈಗಾಗಲೇ ೮-೧೦ ವರ್ಷಗಳು ಸಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಕಟ್ಟಡಗಳ ಕೆಲಸವನ್ನು ಪೂರ್ಣಗೊಳಿಸಲು ಜನರು ಕಷ್ಟಪಟ್ಟು ಸ್ವಂತ ಮನೆಯೊಂದನ್ನು ಪಡೆಯಲು ಹಣ ನೀಡಿದರೂ ಕೂಡ ಇದುವರೆಗೂ ಮನೆಗಳನ್ನು ಬಿಡುಗಡೆ ಮಾಡಿಲ್ಲದಿರುವುದಕ್ಕೆ ಕಾರಣಗಳೇನು ?

ಇ) ಹಾಗಿದ್ದಲ್ಲಿ ನಾಗರೀಕರಿಗೆ ಮನೆಗಳನ್ನು ಒಂದು ನಿಶ್ಚಿತ ದಿನದಂದು ಕೊಡುತ್ತೇವೆ ಎಂದು ಆಶ್ವಾಸನೆ ನೀಡಲಾಗುವುದೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಗೃಹ ನಿರ್ಮಾಣ ಕೆಲಸವನ್ನು ಗುತ್ತಿಗೆದಾರರಿಗೆ ವಹಿಸಿಕೊಟ್ಟು ೬೪ ವರ್ಷಗಳು ಸಂದಿವೆ.